

ಥಾಯ್ಲೆಂಡ್‌ನ ಭತ್ತದ ಗದ್ದೆಯ ಬಳಿ ಚಿಕ್ಕಬಳ್ಳಾಪುರ ಜಿಲ್ಲೆಯ ರೈತರು

ಸ್ವಲ್ಪ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಸ್ಥಳದ ಕುರಿತು ಅಧ್ಯಯನ, ಬುದ್ಧಿವಂತಿಕೆಯಿಂದ ಯೋಜನೆ ರೂಪಿಸುವುದು, ಮುಂಗಡ ಬುಕಿಂಗ್ ಮತ್ತು ಸವಾಲನ್ನು ಎದುರಿಸುವ ಸಾಹಸಿ ಮನೋಭಾವ ನಮ್ಮಲ್ಲಿರಬೇಕು'.

'ಭಾರತದಿಂದ ಕೊಂಚ ಅಗ್ಗದ ದರದಲ್ಲಿ ಪ್ರವಾಸ ಮಾಡಿಬರುವ ಕೆಲವು ರಾಷ್ಟ್ರಗಳೆಂದರೆ – ನೇಪಾಳ, ವಿಯೆಟ್ನಾಂ, ಭೂತಾನ್, ಶ್ರೀಲಂಕಾ, ಲಾವೋಸ್, ಥಾಯ್ಲೆಂಡ್, ಸಿಂಗಾಪೂರ್, ಮಲೇಷಿಯಾ, ಇಂಡೋನೇಷಿಯ, ಮಾಲ್ಡೀವ್ಸ್, ಕಾಂಬೋಡಿಯಾ, ಫಿಲಿಪೈನ್ಸ್, ಹಾಂಕಾಂಗ್, ಯುಎಇ, ಮ್ಯಾನ್ಮಾರ್ ಮುಂತಾದವುಗಳು. ಪ್ರವಾಸಕ್ಕೆ ಆಯ್ಕೆ ಮಾಡುವ ಮುನ್ನ ಪ್ರವಾಸದ ಮುಖ್ಯ ಉದ್ದೇಶ ಮತ್ತು ಏನು ನೋಡಬೇಕು, ಏನು ತಿಳಿಯಬೇಕು ಎಂಬ ಸಂಗತಿಗಳ ಬಗ್ಗೆ ಸ್ಪಷ್ಟತೆಯಿರಬೇಕು' ಎನ್ನುತ್ತಾರೆ ಸಾಗರ್.

## ವಿದೇಶ ಪ್ರವಾಸದಲ್ಲಿ ಏನನ್ನು ಕೊಳ್ಳಬೇಕು?

ಕೊಳ್ಳುವುದಕ್ಕೆ ಮಿತಿಯಿಲ್ಲ. ವಿದೇಶಕ್ಕೆ ಹೋದಾಗ ಅಲ್ಲಿನ ಕರೆನ್ಸಿಯಲ್ಲಿ ಖರ್ಚು ಮಾಡಬೇಕಿರುವುದರಿಂದ ನಾವು ಮನಸ್ಸಿನಲ್ಲಿಯೇ ಗುಣಾಕಾರ ಹಾಕುವುದು ಸಹಜ. ಸಾಮಾನ್ಯವಾಗಿ ಯಾವುದೇ ದೇಶ ಅಥವಾ ಸ್ಥಳಕ್ಕೆ ಹೋದರೂ ಅಲ್ಲಿನ ಭೇಟಿಯ ನೆನಪು ತರುವಂತಹ ಸ್ಮರಣಿಕೆಯನ್ನು ತರುವ ಅಭಿಲಾಷೆಯಿರುತ್ತದೆ. ತಮ್ಮ ಆಪ್ತರಿಗೆ ಅದನ್ನು ಕೊಡಲು ಮತ್ತು ತಮ್ಮ ಮನೆಯಲ್ಲಿಯೂ ಇಟ್ಟುಕೊಳ್ಳಲು ಏನನ್ನಾದರೂ ಕೊಳ್ಳಬೇಕೆಂದು ಪ್ರವಾಸದ ಮೊದಲ ದಿನದಿಂದಲೇ ಹುಡುಕಾಟ ಸಾಗಿರುತ್ತದೆ.

ವಿದೇಶಗಳಲ್ಲಿ ಅಲ್ಲಿನ ಪ್ರತಿಯೊಂದು ಸ್ಮಾರಕ, ಸ್ಥಳ ವಿಶೇಷಗಳನ್ನು ಅದ್ಭುತವಾಗಿ ಮಾರ್ಕೆಟ್ ಮಾಡುತ್ತಾರೆ. ಕೀ ಚೈನ್, ಫ್ರಿಡ್ಜ್ ಮ್ಯಾಗ್ನೆಟ್, ಟೀ ಷರ್ಟ್, ಪುಟಾಣಿ ಪ್ರತಿಕೃತಿಗಳು, ಅಂಚೆ ಚೀಟಿಗಳು ಮುಂತಾದವುಗಳು ಕಡಿಮೆ ಬೆಲೆಯಲ್ಲಿ ಸಿಗುತ್ತವೆ. ಕೆಲವರು ಹೋದ ದೇಶದಿಂದ ತಮ್ಮ ಮನೆಗೆ ಮತ್ತು ಆಪ್ತರಿಗೆ ಪೋಸ್ಟ್ ಕಾರ್ಡ್ ಕಳುಹಿಸುತ್ತಾರೆ. ಕಾರ್ಡಿನ ಮೇಲೆ ಆ ದೇಶದ ಅಂಚೆ ಚೀಟಿ, ಠಸ್ಸೆ, ದಿನಂಕ ಇರುವುದರಿಂದ ಹಲವು ವರ್ಷದ ನಂತರ ಅದನ್ನು ನೋಡಿದಾಗ ನೆನಪುಗಳ ಮೆರವಣಿಗೆಯನ್ನು ಹೊತ್ತು ತರುತ್ತದೆ.

ಕೆಲವು ಕರಕುಶಲ ವಸ್ತುಗಳು, ಪೇಂಟಿಂಗ್, ಪುಸ್ತಕಗಳು, ಸಂಗೀತದ ಸಿಡಿ, ತಿನಿಸುಗಳು ಮುಂತಾದವುಗಳು ನಮ್ಮ ಬಜೆಟ್ ಚೌಕಟ್ಟಿನಲ್ಲಿದ್ದರೆ ಕೊಳ್ಳಬಹುದು. ಕಣ್ಣಿನ ಕ್ಯಾಮೆರಾದಲ್ಲಿ ಎಲ್ಲವನ್ನೂ ಕ್ಲಿಕ್ಕಿಸುತ್ತಾ ಮನಸ್ಸಿನ ಹಾರ್ಡ್ ಡಿಸ್ಕ್‌ನಲ್ಲಿ ಶೇಖರಿಸಿಟ್ಟುಕೊಳ್ಳುವುದು ಮಾತ್ರ ಬಹಳ ಮುಖ್ಯ.

## ವಿಮಾನ ನಿಲ್ದಾಣಗಳ ಆಕರ್ಷಣೆ

ಅನೇಕ ದೇಶಗಳಲ್ಲಿ ವಿಮಾನ ನಿಲ್ದಾಣಗಳು ಕೂಡ ಒಂದು ಪ್ರವಾಸಿ ತಾಣವಾಗಿರುತ್ತವೆ. ಅಲ್ಲಿ ಹತ್ತು ಹಲವು ನೋಡುವ ಸಂಗತಿಗಳಿರುತ್ತವೆ. ವಿಮಾನ ನಿಲ್ದಾಣದಲ್ಲಿ ಕಾಯುವ ಸಂದರ್ಭ ಸಿಕ್ಕಲ್ಲಿ ಆ ಸಮಯವನ್ನು ಸದುಪಯೋಗಪಡಿಸಿಕೊಳ್ಳುವುದನ್ನು ಮರೆಯದಿರಿ. ಅತ್ಯುತ್ತಮ ಪುಸ್ತಕದ ಅಂಗಡಿಗಳು, ಡ್ಯೂಟಿ ಫ್ರೀ ಅಂಗಡಿಗಳು ವಿಮಾನ ನಿಲ್ದಾಣದ ಆಕರ್ಷಣೆ. ಅಲ್ಲಿಯೂ ಕೆಲವು ನಿಷೇಧಿತ ಸ್ಥಳಗಳಿರುತ್ತವೆ. ಆ ಸ್ಥಳಗಳಿಗೆ ಹೋಗಬಾರದು. ವಿದೇಶದಲ್ಲಿ ಅಲ್ಲಿನವರೊಂದಿಗೆ ವ್ಯವಹರಿಸುವಾಗ ನಮ್ಮ ವರ್ತನೆ ಸೌಜನ್ಯಯುತವಾಗಿರಲಿ. ನಾವು ವಿದೇಶಕ್ಕೆ ಹೋದೊಡನೆ ಭಾರತೀಯ ರಾಯಭಾರಿಗಳಾಗಿ ಪರಿವರ್ತಿತರಾಗುತ್ತೇವೆ. ಹಾಗಾಗಿ ಸಭ್ಯ ಪ್ರಜೆಯಾಗಿ ನಡೆದುಕೊಳ್ಳುವ ಮೂಲಕ ದೇಶದ ಘನತೆ ಕಾಯ್ದುಕೊಳ್ಳಬೇಕು. ನಾವು ಭೇಟಿ ನೀಡುವ ದೇಶದ ಕಾನೂನು ಕಾಯ್ದೆಗಳ ಸ್ಥೂಲ ಪರಿಚಯ ನಮಗಿರಬೇಕು.

ಸರಿಯಾಗಿ ಯೋಜಿಸಿ, ಪೂರ್ವ ಸಿದ್ಧತೆ ನಡೆಸಿ ಕೈಗೊಳ್ಳುವ ವಿದೇಶ ಪ್ರವಾಸದಲ್ಲಿ ಅನಿರೀಕ್ಷಿತಗಳು ಸಂಭವಿಸುವುದು ಕಡಿಮೆ. ಯಾವುದೇ ಅಡಚಣೆಗಳಿಲ್ಲದ ಪ್ರವಾಸ ಸಂತೋಷವನ್ನೂ ಹಿತವಾದ ಅನುಭವವನ್ನೂ ನೀಡುತ್ತದೆ. ಹಾಗೆಯೇ ವಿದೇಶ ಪ್ರವಾಸ ಬಹುತೇಕರ ಪಾಲಿಗೆ ದುಂದುವೆಚ್ಚಕ್ಕೆ ನೆಪವೂ ಆಗುತ್ತದೆ. ಕಷ್ಟಪಟ್ಟು ಉಳಿಸಿದ ಹಣವನ್ನು ದುಂದು ಮಾಡುವವರೂ ಇರುತ್ತಾರೆ ಮತ್ತು ದುಂದು ವೆಚ್ಚಗಳಿಗೆ ಪ್ರವಾಸಿ ಸ್ಥಳಗಳಲ್ಲಿ ಸಾಕಷ್ಟು ಅವಕಾಶಗಳೂ ಇರುತ್ತವೆ. ಅನಗತ್ಯ ವೆಚ್ಚಗಳನ್ನು ಸಾಧ್ಯವಾದಷ್ಟೂ ಕಡಿಮೆ ಮಾಡುವುದು ಜಾಣ ಪ್ರವಾಸಿಗನ ಲಕ್ಷಣಗಳಲ್ಲೊಂದು.